(10) ಸರ್ಕಾರಿ ಸ್ವಾಮ್ಯದ ಕಂಪನಿ ಕಾರ್ಪೋರೇಷನ್ ಕಾರ್ಖಾನೆಗಳಿಗೆ ಇರುವ ಆರ್ಥಿಕ ಮಿತಿಯನ್ನು ಹಿಂತೆಗೆದು ನೇಮಕಾತಿ ಮಾಡುವುದು

ಶ್ರೀ ಬಸವರಾಜ್: ಮಾನ್ಯ ಅಧ್ಯಕ್ಷರೇ, ಸರ್ಕಾರಿ ಸ್ವಾಮ್ಯದ ಕಂಪನಿಗಳು ಕಾರ್ಪೋರೇಷನ್‌ಗಳಲ್ಲಿ ತಾಂತ್ರಿಕ ಪಡೆದ ಉದ್ಯೋಗಿಗಳ ಅವಶ್ಯಕತೆ ಇದ್ದರೂ ಸರ್ಕಾರದ ಆರ್ಥಿಕ ಮಿತವ್ಯಯದ ಆಜ್ಞೆಯಿಂದ ನೇಮಕಾತಿ ನಿರ್ಬಂಧ ಇರುತ್ತಿದ್ದು ಇದು ಕಾರ್ಖಾನೆ ಕಂಪೆನಿ ಕಾರ್ಪೋರೇಷನ್‌ಗಳ ದಕ್ಷತೆ ಸೇವಾ ಗುಣಮಟ್ಟ ಇಳಿಮುಖವಾಗಲು ಕಾರಣವಾಗಿರುತ್ತಿದ್ದು ಇದೇ ರೀತಿ ನಿರುದ್ಯೋಗಿ ತಾಂತ್ರಿಕ ಪರಿಣತಿಯ ವಿದ್ಯಾರ್ಥಿಗಳ ಸೇವೆಯನ್ನು ಉಪಯೋಗಿಸಿಕೊಳ್ಳದೆ ಅಸಮತೋಲನ ಉಂಟಾಗಿದೆ.

ಇದರಿಂದ ಸರ್ಕಾರವು ಕೂಡಲೇ ಆರ್ಥಿಕ ಮಿತವ್ಯಯದ ಆಜ್ಞೆಯನ್ನು ಹಿಂತೆಗೆದು ಅವಶ್ಯ ಪ್ರಮಾಣದಲ್ಲಿ ಕಂಪೆನಿ ಕಾರ್ಪೋರೇಷನ್‌ಗಳಲ್ಲಿ ನೇಮಕಾತಿಯನ್ನು ಮಾಡುವಂತೆ ಆಜ್ಞೆ ಹೊರಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ ಸರ್ಕಾರವು ಆರ್ಥಿಕ ಮಿತವ್ಯಯವನ್ನು ಗಮನದಲ್ಲಿಟ್ಟುಕೊಂಡು ನೇರ ನೇಮಕಾತಿ ಬಗ್ಗೆ ಸರ್ಕಾರಿ ಸ್ವಾಮ್ಯದ ಕಂಪನಿಗಳು ಕಾರ್ಪೋರೇಷನ್‌ಗಳಲ್ಲಿ ನೇಮಕಾತಿ ನಿರ್ಬಂಧ ಜಾರಿಗೊಳಿಸಿದೆ. (ಸರ್ಕಾರಿ ಪತ್ರ ಸಂಖ್ಯೆ: 7 ಸಿ. ಎಂ.ಐ 90, ದಿನಾಂಕ 26.2.90) ಈ ರೀತಿಯ ನಿರ್ಬಂಧ ಎಲ್ಲಾ ಸರ್ಕಾರದ ಇಲಾಖೆಗಳಿಗೂ ಜಾರಿಗೊಳಿಸಲಾಗಿದೆ. ಆನಂತರ ಕೆಲವು ಕಂಪನಿಗಳು ಕಾರ್ಪೋರೇಷನ್‌ಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ತಮ್ಮ ಉತ್ಪಾದನೆ ಹಾಗೂ ಮಾರಾಟ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಲು ಕೆಲವು ತಾಂತ್ರಿಕ ಹುದ್ದೆಗಳನ್ನು ತುಂಬುವುದು ಅತ್ಯಾವಶ್ಯಕವಾಗಿದೆ ಎಂದು ತಿಳಿಸಿ ಕೆಲವು ಹುದ್ದೆಗಳನ್ನು ತುಂಬಲು ಅನುಮತಿ ಕೋರಿದ್ದಾರೆ.

ಈ ಪ್ರಸ್ತಾಪನೆಗಳನ್ನು ಪರಿಶೀಲಿಸಿದ ನಂತರ ಸರ್ಕಾರವು ಶಾಸನ ಬದ್ಧ ಹುದ್ದೆಗಳನ್ನು ಮತ್ತು ಇತರೆ ತಾಂತ್ರಿಕ ಹುದ್ದೆಗಳನ್ನು ತುಂಬಬೇಕಾದ ಅವಶ್ಯಕತೆ ಇರುವುದನ್ನು ಮನಗಂಡು ಇಂತಹ ಪ್ರಕರಣಗಳನ್ನು ಪರಿಶೀಲಿಸಿ ನಂತರ ನಿರ್ಬಂಧದ ಆಜ್ಞೆಯಿಂದ ವಿನಾಯಿತಿ ಕೊಡುವುದು ಸೂಕ್ತವೆಂಬ ತೀರ್ಮಾನಕ್ಕೆ ಬಂದಿರುತ್ತದೆ.

ಆದ್ದರಿಂದ ಈ ರೀತಿ ಪ್ರಕರಣಗಳನ್ನು ಪರಿಶೀಲಿಸಿ ವಿನಾಯಿತಿ ನೀಡಲು ಸರ್ಕಾರದ ಮುಖ್ಯಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಸರ್ಕಾರ ಆದೇಶ ಸಂಖ್ಯೆ: ಸಿ.ಐ. 7 ಸಿ.ಎಂ.ಡಿ 90, ದಿನಾಂಕ 21.1.91ರಲ್ಲಿ ನೇಮಿಸಲಾಗಿದೆ. ಇದರಿಂದ ನಿರ್ಬಂಧ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕಾದ ಅವಶ್ಯಕತೆ ಇರುವುದಿಲ್ಲ.

11) ಗುಲ್ಬರ್ಗ ಜಿಲ್ಲೆಯ ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳನ್ನು ಹಸಿರು ಪೀಡಿತ ಪ್ರದೇಶ ಎಂದು ಘೋಷಿಸುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೇ ಗುಲ್ಬರ್ಗಾ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಖರೀಫ್ ಹಾಗೂ ರಬ್ಬೀ ಬೆಳೆಗಳು ನಾಶವಾಗಿದೆ ಅದರಲ್ಲಿ ನಮ್ಮ ಸೇಡಂ ಮತ ಕ್ಷೇತ್ರ (ಸೇಡಂ ತಲ್ಲೂಕಾ ಮತ್ತು ಚಿತ್ತಾಪುರ 11 ಗ್ರಾಮಗಳು) ದಲ್ಲಿನ ಮುಖ್ಯ ಬೆಳೆಯಾದ ತೊಗರಿ ಬೆಳೆಗೆ ಔಷದಿಗಳು ಸಿಂಪರಣೆ ಮಾಡಿದ್ದಾರೂ ಸಹಾ ಒಣಗಿಹೊಗಿದ್ದು ಉಳಿದ ಬೆಳೆಗಾಗಿ ಪುನ: ಕ್ರಿಮಿನಾಶಕಗಳನ್ನು ಸಿಂಪಡಿಸಿದ್ದು ಆ ಬೆಳೆ ಕೂಡ ನಾಶವಾಗಿರುತ್ತದೆ.

ರಬ್ಬಿಯಲ್ಲಿ ಕಡ್ಲಿಗೆ ಸಹ 10-12 ಕ್ರಿಮಿನಾಶಕಗಳನ್ನು ಸಿಂಪಡಿಸಿದರೂ ಸಹಾ ಪೂರ್ಣ ಬೆಳೆ ನಾಶವಾಗಿದೆ. ಈ ಪ್ರಕಾರ ಈ ವರ್ಷ 1990-91ನೇ ಸಾಲಿನಲ್ಲಿ

ಎಲ್ಲಾ ಬೆಳೆಗಳು ನಾಶವಾಗಿವೆ. ನಾನು ಈ ಬಗ್ಗೆ ಪ್ರಶ್ನೆ ಕೇಳಿದರೆ ನಮ್ಮ ಪ್ರಶ್ನೆ ಸಂಖ್ಯೆ 1235 ದಿನಾಂಕ 21-3-91ರಂದು ಬೆಳೆ ನಾಶಾವಾದ ಬಗ್ಗೆ ಒಪ್ಪಿರುತ್ತಾರೆ.

ಅದರಲ್ಲಿ ಬೆಳೆ ನಾಶವಾದರೆ ನಮ್ಮ ಭಾಗವನ್ನು ಹಸಿ ಬರಪೀಡಿತ ಪ್ರದೇಶವೆಂದು ಘೋಶಿಸಲು ನಾನು ಪ್ರಶ್ನೆಯಲ್ಲಿ ಕೇಳಿದರೆ ಅದನ್ನು ಕಡಿತಗೊಳಿಸಿದ ಕಾರಣ ನಾನು ಸದನದಲ್ಲಿ ಕೇಳಿದರೆ ಪರಿಶೀಲಿಸಲಾಗುವುದೆಂದು ತಿಳಿಸಲಾಯಿತು. ಉತ್ತರವಿಲ್ಲ. ಕಾರಣ ಕೃಷಿ ಇಬಾಖೆಯವರು ಬೆಳೆಗ ನಾಶವಾಗಿದೆ ಎಂದು ಒಪ್ಪಿದ ಪ್ರಕಾರ ನಮ್ಮ ಸೇಡಂ ಮತ ಕ್ಷೇತ್ರ ತಾಲ್ಲೂಕು ಮತ್ತು ಚಿತ್ತಾಪುರ ತಾಲ್ಲೂಕಿನ 11 ಗ್ರಾಮಗಳು) ಹಸಿ ಬರ ಪೀಡಿತ ಪ್ರದೇಶವೆಂದು ಘೋಷಿಸಲು ರೈತರ ಮುಂದಿನ ಸಾಲ ಕಂದಾಯ ಇತ್ಯಾದಿ ಮನ್ನಾ ಮಾಡಿ ರೈತರ ಮುಂದಿನ ಜೀವನೋಪಾಯ ಮತ್ತು ಒಕ್ಕಲುತನ ಸಾಗಿಸಲು ವ್ಯವಸ್ಥೆ ಮಾಡಲು ಸರ್ಕಾರದ ಗಮನ ಸೆಳೆಯುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ: (ಕೃಷಿ ಮತ್ತು ತೋಟಾಗಾರಿಕಾ ಸಚಿವರು): ಅಧ್ಯಕ್ಷರೇ ಮಾನ್ಯ ಸದಸ್ಯರು ಗುಲ್ಬರ್ಗಾ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಮುಖ್ಯವಾಗಿ ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳ 11 ಗ್ರಾಮಗಳಲ್ಲಿ ಬೆಳೆಗಳು ನಾಶವಾಗಿದೆ ಮತ್ತು ತೊಗರಿ ಬೆಳೆಗೆ ಔಷದಿ ಸಿಂಪಡಿಸಿದರೂ ಕೂಡ ಬೆಳೆ ನಾಶವಾಗಿದೆಯೆಂದು ಪ್ರಸ್ತಾಪಿಸಿದ್ದಾರೆ. ಸಂಬಂಧಪಟ್ಟ ರೈತರಿಗೆ ಸಾಲ ಕಂದಾಯ ಇತ್ಯಾದಿ ಮನ್ನಾ ಮಾಡಬೇಕೆಂದು ಸೂಚಿಸಿದ್ದಾರೆ.

ಈ ವಿಷಯ ದಿನಾಂಕ 21-3-1991ರಂದು ನಾನು ಪ್ರಶ್ನೆ ಸಂಖ್ಯೆ 1235ಕ್ಕೆ ನೀಡಿದ ಉತ್ತರಗಳ ಹಿನ್ನೆಲೆಯಲ್ಲಿ ರೈತರಿಗೆ ಪರಿಹಾರ ನೀಡಬೇಕೆಂದು ಸಲಹೆ ಮಾಡದೆ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಸೀಮಿತವಾದ ಉತ್ತರ ನಿಡಲಾಗಿತ್ತು. ಅತಿವೃಷ್ಟಿಯಿಂದ ಮುಂಗಾರು ಮತ್ತು ಹಿಂಗಾರು ಬೆಳೆಗಳ ಫುತ್ತು ಮುಖ್ಯ ಬೆಳೆಯಾದ ತೊಗರಿಗೆ ಹಾನಿಯಾಗಿರುವುದು ನಿಜ. ಆದರೆ ಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಅತಿವೃಷ್ಟಿಯಿಂದ ಕೃಷಿ ಬೆಳೆಗಳು ಪೂರ್ಣವಾಗಿದ್ದರೆ ಕಂದಾಯ ಇಲಾಖೆ ಪ್ರಕೃತಿಯ ವಿಕೋಪದಿಂದ ಆಗಿರುವ ನಷ್ಟಕ್ಕೆ ಪರಿಹಾರ ನೀಡಲು ಕ್ರಮ ತೆಗೆದುಕೊಳ್ಳವುದು. ಕೃಷಿ ಇಲಾಖೆಯು ಈ ರೀತಿಯಾದ ಪರಿಹಾರ ನೀಡಲು ಬರುವುದಿಲ್ಲ ದಿನಾಂಕ 21-3-1991ರಂದು ಪ್ರಶ್ನೆ ಸಂಖ್ಯೆ 1235ಕ್ಕೆ ಉತ್ತರ ನೀಡುವಾಗ ಇದೇ ವಿಷಯ ಮಾನ್ಯ ಸದಸ್ಯರ ಗಮನಕ್ಕೆ ತಂದಿತ್ತೆ ಈಗಲೂ ಕೂಡ ಮಾನ್ಯ ಸದಸ್ಯರು ಕಂದಾಯ ಇಲಾಖೆಯನ್ನು ಸಂಪರ್ಕಿಸಿದರೆ ನಿಯಮಗಳಿಗನುಸಾರದ ರೈತರಿಗೆ ಪರಿಹಾರ ನೀಡಲು ಸಾಧ್ಯವಾದೀತು.

(12) ಸೌದತ್ತಿ ತಲ್ಲೂಕು ಸದಗಟ್ಟಿ ಮತ್ತು ಹಿಟ್ಟಣಗಿ ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯ.

ಶ್ರೀಮಾನ್ ಶಿವಾನಂದ ಎಚ್. ಕೌಜಲಗಿ : ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಪೈಕಿ ಮುರ ಖಿಬಾ ಸವದತ್ತಿ ತಾಲ್ಲೂಕು ಪೈಕಿ ಸುತಗಟ್ಟಿ ಗ್ರಾಮಗಳಲ್ಲಿ ಪೈಪ್‌ಡ್ ವಾಟರ್ ಸಪ್ಲೈ ಕೆಲಸ ಪ್ರಾರಂಭವಾಗಿದ್ದು ಅದು ಇನ್ನುವರೆಗೂ ಮುಗಿದಿರುವುದಿಲ್ಲ. ಈ ಕೆಲಸ ಇನ್ನುವರೆಗೂ ಮುಗಿಯದೇ ಇದ್ದುದರಿಂದ ಅಲ್ಲಿ ಕುಡಿಯುವ ನೀರನ ತೊಂದರೆ ಬಹಳವಿದೆ. ಆದಕಾರಣ ಕೂಡಲೇ ಅಲ್ಲಿ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಬೇಕು. ಮತ್ತು ಅಲ್ಲಿ ಕೂಡಲೇ ಎರಡು ಗ್ರಾಮಗಳಲ್ಲಿ ಹತ್ತು ಬೋರ್‌ವೆಲ್‌ಗಳನ್ನು ತೋಡಿಸಬೇಕು ಎಂದು ಮಾನ್ಯ ಗ್ರಾಮಿಣಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).